**ಸಿ.ಸಿ. ಸಂಃ 307/2023, CW-1, PW-1**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ .ದ. ನ್ಯಾ.ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ 609/2024

| | | |
|---|---|---|
| ಸಾಕ್ಷಿಯ ಹೆಸರುಃ | ಭಾಗ್ಯ | ಪ್ರಾಸಾಃಃ 1 |
| ಗಂಡನ ಹೆಸರುಃ | ರವಿಕುಮಾರ್ | ಚಾಸಾಃಃ 1 |
| ವಯಸ್ಸುಃ | 25 ವರ್ಷ | ಪ್ರಮಾಣೀಕರಿಸಿದ<br>ದಿಃ 17.03.2026 |
| ಉದ್ಯೋಗಃ | ಗೃಹಿಣಿ | |
| ವಾಸ ಸ್ಥಳಃ | ಕಿರನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು. | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

1. ಈ ಕೇಸಿನ 1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಮಾವ ಹಾಗೂ 3 ನೇ ಆರೋಪಿ ನನ್ನ ಅತ್ತೆ.
2. 1 ನೇ ಆರೋಪಿ ನನ್ನನ್ನು ದಿಃ 31.03.2021 ರಂದು ಮದುವೆಯಾಗಿರುತ್ತಾರೆ. ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿರುತ್ತೇನೆ. ನನ್ನ ಮತ್ತು 1 ನೇ ಆರೋಪಿಯ ನಡುವೆ ಸಣ್ಣಪುಟ್ಟ ಮನಸ್ತಾಪವಾಗಿ, ಆ ಬಗ್ಗೆ ಪೊಲೀಸರಿಗೆ ಮೌಖಿಕವಾಗಿ ತಿಳಿಸಿದ್ದು, ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆಸಿ ಬುದ್ದಿವಾದ ಹೇಳುವಂತೆ ಪೊಲೀಸರಿಗೆ ಕೋರಿಕೊಂಡಿರುತ್ತೇನೆ.
3. ಪೊಲೀಸರು ಪೊಲೀಸ್ ಠಾಣೆಯಲ್ಲಿ ಕೆಲವು ಖಾಲಿ ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಈ ಕೇಸಿನ ಆರೋಪಿತರು ನನಗೆ ಅವಾಚ್ಯವಾಗಿ ಬೈದಿಲ್ಲ, ಹೆಚ್ಚಿನ ವರದಕ್ಷಿಣೆ ತರುವಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿಲ್ಲ, ನನ್ನನ್ನು ಅವಾಚ್ಯವಾಗಿ ಬೈದಿಲ್ಲ ಹಾಗೂ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿಲ್ಲ. ಆ ರೀತಿ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ.
4. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು **ನಿ.ಪಿ.1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು, ನಿ.ಪಿ.1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲೀಸರೂ ಸಹ ಓದಿ ತಿಳಿಸಿರುವುದಿಲ್ಲ.

5. ಸಾಕ್ಷಿಯು ಕೃತ್ಯ ನಡೆದ ಸ್ಥಳ ಮಹಜರ್ ಹಾಗೂ ಮದುವೆ ಆದ ಸ್ಥಳದ ಮಹಜರ್ ಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿ.ಪಿ.2 ಮತ್ತು 3** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2(ಎ) ಮತ್ತು ನಿಪಿ.3(ಎ)** ಎಂದು ಗುರುತಿಸಲಾಯಿತು, ನಿ.ಪಿ.2 ಮತ್ತು 3 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲೀಸರೂ ಸಹ ಓದಿ ತಿಳಿಸಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ. ನನ್ನ ಸಮಕ್ಷಮ ಯಾವುದೇ ದಾಖಲೆಯನ್ನು ವಶಪಡಿಸಿಕೊಂಡಿಲ್ಲ. ನಾನು ಯಾವುದೇ ಮರು ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ನನ್ನ ಹಾಗೂ 1 ನೇ ಆರೋಪಿಯ ಮದುವೆಯಾದ ನಂತರ 6 ತಿಂಗಳು ಚೆನ್ನಾಗಿದ್ದು, ನಂತರ ಆರೋಪಿತರು ಸಣ್ಣಪುಟ್ಟ ವಿಚಾರಕ್ಕೆ ಬಾಯಿಗೆ ಬಂದಂತೆ ಬೇವರ್ಸಿ ಮುಂಡೆ ನೀನು ಎಲ್ಲಿದ್ದಿಯೋ ನಮಗೆ ಗಂಟಾಕಿ ಕೊಂಡೆ ಎಂದು ಅವಾಚ್ಯವಾಗಿ ಬೈಯುತ್ತಾ 2 ಮತ್ತು 3 ನೇ ಆರೋತಪಿರು ನನಗೆ ತವರು ಮನೆಯಿಂದ ಆಸ್ತಿ ತರುವಂತೆ ಮಾನಸಿಕ ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ನನಗೆ ತವರು ಮನೆಯಿಂದ ಆಸ್ತಿಯನ್ನು ತರುವಂತೆ ಮಾನಸಿಕವಾಗಿ ಹಿಂಸೆಯನ್ನು ನೀಡುತ್ತಿದ್ದು, ಮನೆಯಲ್ಲಿ ಊಟ, ತಿಂಡಿಯನ್ನು ಮಾಡಲು ಬಿಡದೇ, ಮನೆ ಬಾಡಿಗೆ ಕೊಟ್ಟು ಇರು ಎಂದು ವಾಶ್ ರೂಮ್, ಟೈಲೇಟ್ ರೂಮ್ ಸಹ ಹೋಗಲು ಬಿಡದೇ ನೂರು ರೂಪಾಯಿ ಹಣ ಕೊಟ್ಟು ಹೋಗು ಎಂದು ಹಿಂಸೆ ನೀಡುತ್ತಿದ್ದರು ಎಂದರೆ ಸರಿಯಲ್ಲ.

2. 2022 ರ ಮಾರ್ಚ್ ತಿಂಗಳಲ್ಲಿ ಆರೋಪಿತರು ನನಗೆ ನನ್ನ ತಾಯಿ ಮನೆಯಿಂದ ಆಸ್ತಿ ಬರೆಸಿಕೊಂಡು ಬಂದರೆ ಮಾತ್ರ ನಮ್ಮ ಆಸ್ತಿ ಮತ್ತು ಹಣಕಾಸನ್ನು ನಿನಗೆ ಕೊಡುತ್ತೇವೆ ಇಲ್ಲವಾದರೇ ನಮ್ಮ ಮನೆ ಆಸ್ತಿಯಲ್ಲಿ ಏನು ಕೊಡುವುದಿಲ್ಲವೆಂದು ಹೇಳಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು ನೀಡಿದ್ದರು ಎಂದರೆ ಸರಿಯಲ್ಲ.

3. ನಂತರ ದಿನಾಂಕ 19.06.2022 ರಂದು 1 ನೇ ಆರೋಪಿಯು 2 ಮತ್ತು 3 ನೇ ಆರೋಪಿಳ ಮಾತುಗಳನ್ನು ಕೇಳಿಕೊಂಡು ನನಗೆ ನನ್ನ ತಾಯಿ ಮನೆಯಿಂದ ಆಸ್ತಿ ಬರೆಸಿಕೊಂಡು ತರದೇ ಬಂದರೇ ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಕೈಗಳಿಂದ ನನ್ನ ಎದೆಗೆ ಹಾಗೂ ಹಣೆಗೆ ಹೊಡೆದು ವಿಚ್ಛೇದನೆ ಕೊಟ್ಟು ಹೋಗು ಎಂದು ನನ್ನ ತಾಳಿಯನ್ನು ಕಿತ್ತು ಹಾಕಿ ಅವರನ್ನು ಮನೆಯಿಂದ ಆಚೆಗೆ ದಬ್ಬಿರುತ್ತಾರೆ ಎಂದರೆ ಸರಿಯಲ್ಲ.

4. 2 ನೇ ಆರೋಪಿಯು ನಾನು ಮನೆಯಲ್ಲಿ ಸ್ನಾನ ಮಾಡುವಾಗ ಬಟ್ಟೆ ಬದಲಾಯಿಸುವಾಗ ಕದ್ದು ಮುಚ್ಚಿ ನೋಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಾನು ನಿಪಿ - 1 ರಂತೆ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

5. ನಂತರ ದಿಃ 23.12.2022 ರಂದು ಪೊಲೀಸರು ಆರೋಪಿಗಳು ವಾಸವಿರುವ ಮನೆಯ ಬಳಿ ಬಂದಾಗ ಚಾಸಾ - 12 ಮತ್ತು 13 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಮಹಜರ್ ಕ್ರಮವವನ್ನು ಬೆಳಿಗ್ಗೆ 9-00 ರಿಂದ 11-00 ಗಂಟೆಯವರೆಗೆ ನಿಪಿ - 2 ರಂತೆ ಜರುಗಿಸಿ ಒಂದು ಮದುವೆ ಆಮಂತ್ರಣ ಪತ್ರಿಕೆಯನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

6. ನಂತರ ಅದೇ ದಿನ ಪೊಲೀಸರು ನನ್ನ ಹಾಗೂ 1 ನೇ ಆರೋಪಿಯ ಮದುವೆಯಾದ ಸ್ಥಳವಾದ ಭುವನಹಳ್ಳಿ ಗ್ರಾಮದ ನಾಗವೇಣಿ ರವರ ಬ್ಯಾರನ್ ಮನೆಯ ಬಳಿ ಬಂದಾಗ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-12 ಹಾಗೂ 13 ರವರ ಸಮಕ್ಷಮ ಸ್ಥಳ ಮಹಜರ್ ಕ್ರಮವವನ್ನು ಮಧ್ಯಾಹ್ನ 3-00 ರಿಂದ 3-45 ಗಂಟೆಯವರೆಗೆ ನಿಪಿ-3 ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

7. ನಂತರ ದಿಃ 28.02.2023 ರಂದು ನಾನು ಪೊಲೀಸರ ಮುಂದೆ ಈಗ ಓದಿ ಹೇಳಿ ಕೇಳಿಸಿಕೊಂಡಂತೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯನ್ನು ನಿಪಿ - 4 ಎಂದು ಗುರುತಿಸಲಾಯಿತು.

8. ಈಗ ನಾನು ಮತ್ತು 1 ನೇ ಆರೋಪಿ ರಾಜೀ ಮಾಡಿಕೊಂಡು ಇಬ್ಬರು ಪರಸ್ಪರ ಒಪ್ಪಿ ವಿಚ್ಛೇದನ ಪಡೆಯಲು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಹಾಗಾಗಿ ಈ ಕೇಸನ್ನು ನಡೆಸಲು ಇಚ್ಛಿಸುವುದಿಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ**

ಇಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಪಿರಿಯಾಪಟ್ಟಣ.